ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಕಮಲಾ ನರಸಿಂಹ ಕನ್ನಡ ಉಪನ್ಯಾಸಕಿ. 'ಬೆಲ್ಲದ ಮಡು', 'ಈ ನೆಲ' (ಕವನ ಸಂಕಲನಗಳು), 'ಆಪೋಷನ' (ಕಾದಂಬರಿ) ಮತ್ತು 'ಷಡ್ಯಂತ್ರ ಮರುಕಳಿಸದೆ ಜೀವ' (ಕಥಾಸಂಕಲನ) ಅವರ ಪ್ರಮುಖ ಕೃತಿಗಳು.

ಸುಜನ್‌ಗೆ ಸೆಲ್ಯೂಟ್ ಮಾಡಿ ಕೈಕುಲುಕಿ ಎದುರು ಕೂತು ಏನ್ ಸಾರ್ ವಿಷಯ ಎಂದಾಗ ಸುಜನ್ ತನ್ನ ಇಂಗಿತವನ್ನು ತರ್ಕಬದ್ಧವಾಗಿ ವಿವರಿಸಿ, 'ಈ ಆಸಾದಿ ಬಾನಾ ತಿನ್ನೋದು, ಗಾವು ಸಿಗಿಯೋದನ್ನ ಹೇಗಾದರೂ ತಡೆಯೋಣ ಸಾರ್. ನೀವು ನನ್ನ ಆದೇಶವನ್ನು ತಪ್ಪದೆ ಪಾಲಿಸಬೇಕು. ಆಗತ್ತ? ಮಿನಿಸ್ಟರ್ ಸಾಹೇಬ್ರು ಹೇಳಿದಾರೆ, ಈ ಅನಿಷ್ಟ ಪದ್ಧತಿಯನ್ನು ತಡೆಹಿಡಿಯಲು ಜಾಗೃತಿ ಆದೇಶ ಕಳಿಸುತ್ತಾರಂತೆ. ಇದನ್ನು ಖಂಡಿಸಿ ಜಾಗೃತಿ ಮೂಡಿಸಬೇಕು' ಎಂದಾಗ, ಮುರುಳಿ ಮೋಹನ್ ಸ್ವಲ್ಪ ಹೊತ್ತು ಮಾತಾಡಲಿಲ್ಲ. ನಂತರ ಸುಜನ್ ಕುರಿತು ಆಡಿದ ಮಾತು ಈ ಹಿಂದೆ ಮಾತಾಡಿದ ರಾಜಕಾರಣಿಗಳಿಗಿಂತ ಭಿನ್ನವಾಗಿತ್ತು.

'ನೋಡಿ ಸುಜನ್ ಸಾಹೇಬ್ರೇ, ನಾನು ನಿಮಗಿಂತ ಹಿರಿಯ ಅಂತ ಮಾತಾಡ್ತೇನೆ. ಈ ಆಸಾದಿ ತಿನ್ನುವುದು, ಮತ್ತೊಬ್ಬ ಗಾವು ಸಿಗಿಯುವುದು ನಮ್ಮ ಕಣ್ಣಿಗೆ ಕಾಣದಂಥ ವಿಷಯ. ಎದುರಿಗೆ ಮಾಡಿದರೆ ಪಾಪ ಅಂತ ತಡೆಯಬಹುದು. ನಮಗೆ ಕಾಣದಂತೆ ಮಾಡಿದರೆ ಹೇಗೆ ವಿರೋಧಿಸುವುದು? ದಿನಾ ಕುರಿ ಕೋಳಿ ಬೀಳ್ತನೇ ಇರತ್ತೆ. ನಾವು ಅದನ್ನೂ ನೋಡುವುದು ತಪ್ಪು. ನಾವು ಅದಕ್ಕೆ ಸಾಕ್ಷಿಯಾಗಬಾರದು. ನಡೆದರೆ ಅಲ್ಲವೇ ತಡೆಯುವುದು?'

'ಗಾವು ಎಲ್ಲರ ಸಮ್ಮುಖದಲ್ಲಿ ಓಪನ್ ಅಗಿ ನಡೆಯುತ್ತಲ್ಲ?'

'ಹೌದು. ನೋಡಣ, ಅಷ್ಟರಲ್ಲಿ ಆದೇಶ ಬಂದರೆ ಜನ ಸೇರದಂತೆ ತಡೆಯೋಣ. ಗಾವೂ ನಡೆಯದ ಹಾಗೆ ಬಂದೋಬಸ್ತ್ ಮಾಡೋಣ. ಸರಿ. ನಾನು ಆದೇಶ ಬರುವ ಹಾಗೆ ಪ್ರಯತ್ನ ಮಾಡುತ್ತೇನೆ. ಈ ವಿಷಯ ಗಂಭೀರವಾಗಿ ಪರಿಗಣಿಸಿ.'

'ಖಂಡಿತ, ನಿಮ್ಮ ಆದೇಶವೇ ನಮಗೆ ಮುಖ್ಯ. ಬರುವತನಕ ಯಾವುದೇ ರಾಜಕೀಯ ನಡೆಯದ ಹಾಗೆ ನೋಡಿಕೋಬೇಕು. ಅದೂ ಕೂಡ ನಮ್ಮ ಕಣ್ಣಿಗೆ ಕಾಣಿಸುವುದಿಲ್ಲ. ಈ ಪ್ರಾಣಿಬಲಿ ಕೊಟ್ಟ ಹಾಗೆ ರಾಜಕಾರಣಿಗಳು ಯಾವಾಗ ಏನು ಬೇಕಾದರೂ ಬಲಿ ತೆಗೆದುಕೊಳ್ತಾರೆ.'

ಇಬ್ಬರೂ ಕೈ ಕುಲುಕಿ ಎದ್ದರು. ಮುರುಳಿ ಮೋಹನ್ ಉಪವಿಭಾಗಾಧಿಕಾರಿ ಸುಜನ್‌ಗೆ ಸೆಲ್ಯೂಟ್ ಹೊಡೆದು ಹೊರ ನಡೆದರು. ಸುಜನ್‌ಗೆ ಇನ್ನೂ ಸಮಸ್ಯೆ ಇದೆ, ಇದು ಬಗೆಹರಿದಿಲ್ಲ ಎಂದೆನಿಸಿತು. ಇರಲಿ ಎಂದು ವಿಜ್ಞಾನ ಕೇಂದ್ರದಿಂದ ಶ್ರೀರಾಮ್ ಕಳಿಸಿದ ಪತ್ರ ಹಾಗೂ ಪ್ರಾಣಿ ದಯಾ ಸಂಘದಿಂದ ಬಂದ ಪತ್ರವನ್ನು ಕಾನೂನು ಸಚಿವರ ಕಚೇರಿಗೆ ಸ್ಕ್ಯಾನ್ ಮಾಡಿ ಫ್ಯಾಕ್ಸ್ ಮಾಡಲು ಹೇಳಿ ಹೊರಗಡೆ ಬಂದ. ಒಂದಷ್ಟು ಕೆಲಸಗಳಿದ್ದವು. ಅವುಗಳನ್ನು ಮುಗಿಸಿ ಬರಲು ಜೀಪ್ ಹತ್ತಿದ.

* * *

ರಾತ್ರಿ ಮಲಗುವ ಸಮಯ. ಒಂದಷ್ಟು ಜನ ಕ್ವಾರ್ಟ್ರಸ್ ಮುಂದೆ ಬಂದಿದ್ದರು. ಅದರಲ್ಲಿ ಸರಪಂಚರು ಕೆಲವು ಜನ ಪಡ್ಡೆ ಹುಡುಗರೂ ಇದ್ದರು. ಕಾವಲು ಪೊಲೀಸ್ ಬಂದು,'ಸಾರ್, ನಿಮ್ಮನ್ನು ಕಾಣಬೇಕಂತೆ' ಅಂದಾಗ ತಿಳಿಯಿತು, ಇದು ಈ ಎಂಎಲ್‌ಎ ಕೆಲಸ ಅಂತ. ಜನರನ್ನು ಎತ್ತಿಕಟ್ಟಿ ಕಳ್ಸಿದಾರೆ. 'ಬೆಳಿಗ್ಗೆ ಕಚೇರಿಗೆ ಬರಕ್ಕೆ ಹೇಳು, ಈಗ ಆಯಾಸ ಆಗಿದೆ' ಎಂದು ಹೇಳಿ ಕಳುಹಿಸಲು ಬಂದಾಗ, 'ಸಾರ್, ಇಲ್ಲ ಐದು ನಿಮಿಷ ಮಾತಾಡ್ಬೇಕಂತೆ' ಎಂದ ಸಹಾಯಕ. ಶರ್ಟ್ ತೊಟ್ಟು ಹೊರ ಬಂದ ಸುಜನ್. ಊರಿನ ಪ್ರಮುಖ ವ್ಯಕ್ತಿಗಳು ಮಾರಮ್ಮದೇವಿಯ ಪೂಜಾರ್‍ರು, ಸರಪಂಚರು ಎಲ್ಲಾ ಕಾಂಪೌಂಡ್ ಒಳಗೆ ಬಂದರು. ಸುಜನ್ ಕುರ್ಚಿ ತರಲು ಹೇಳಿ ಹಿರಿಯರಿಗೆ ಕುಳಿತುಕೊಳ್ಳಲು ಹೇಳಿದ. ಕೆಲವು ಹುಡುಗರು ನಿಂತೇ ಇದ್ದರು. ಮಾತು ಹೊರಡಲಿಲ್ಲ.

'ಏನು, ಆಚಾರ್‍ರೆ ಬಂದದ್ದು?' ಎಂದ ಸುಜನ್, ಪೂಜಾರ್‍ರು ಜಗದಾಚಾರ್‌ರವರನ್ನು ವಿಚಾರಿಸಿದ್ರು. ಅವರು ವಂಶಪಾರಂಪರ್ಯವಾಗಿ ಮಾರಮ್ಮತಾಯಿಯನ್ನು ಪೂಜಿಸುತ್ತಾ ಬಂದವರು. ಮಾತಿಗೆ ಪದ ಸಿಗದೆ ಅವರನ್ನು ಮಾತಿಗೆ ಎಳೆಯಲಾಯ್ತು.